





ಎಂದು ತಮ್ಮ ಛಾಯಾಗ್ರಹಣದ ಆರಂಭದ ದಿನಗಳನ್ನು ತೆರೆದಿಟ್ಟರು ಪ್ರಥಮೇಶ್.

## ಜಾಗೃತಿಗೆ ಜೊತೆಯಾದ ಕ್ಯಾಮೆರಾ

‘ಜನರಲ್ಲಿ ಹಾವುಗಳ ಕುರಿತು ಮೂಢನಂಬಿಕೆಗಳಿವೆ. ಅವುಗಳನ್ನು ನನ್ನ ಅರಿವಿನ ಸಹಾಯದಿಂದ ತೊಡೆದುಹಾಕುವ ಪ್ರಯತ್ನ ಆರಂಭಿಸಿದೆ. 12 ವರ್ಷದವನಿದ್ದಾಗ ಹಾವುಗಳನ್ನು ರಕ್ಷಿಸಿ ಹತ್ತಿರದ ಕಾಡುಗಳಿಗೆ ಬಿಡುವುದನ್ನು ಕಲಿತೆ. ಆ ಕೆಲಸವನ್ನು ದಾಖಲಿಸುವ ಮನಸ್ಸಾಯಿತು. ಆದರೆ ಮೊಬೈಲ್ ಫೋನ್ ಕ್ಯಾಮೆರಾ ಅಪರೂಪ ಹಾಗೂ ದುಬಾರಿಯಾಗಿದ್ದ ಕಾಲವದು. ಹೀಗಾಗಿ ಗೆಳೆಯನಿಂದ ಪಾಯಿಂಟ್ ಅಂಡ್ ಶೂಟ್ ಕ್ಯಾಮೆರಾ ತೆಗೆದುಕೊಂಡು ಹಾವಿನ ರಕ್ಷಣಾ ಕಾರ್ಯವನ್ನು ದಾಖಲಿಸಿದೆ. ಜಾಗೃತಿ ಕೆಲಸ ಸರಾಗವಾಯಿತು. ಆನಂತರ ನನ್ನ ಸುತ್ತಮುತ್ತಲಿನ ಸಣ್ಣ ಪುಟ್ಟ ಜೀವಿಗಳ ಫೋಟೊಗಳನ್ನು ಕ್ಲಿಕ್ಕಿಸಲು ಶುರು ಮಾಡಿದೆ. ಅತಿ ಸಣ್ಣ ಜೀವಿಗಳ ವಿಶಾಲ ಜಗತ್ತು ನನ್ನ ಮುಂದೆ ತೆರೆದುಕೊಂಡಿತ್ತು. ಹಾವುಗಳು, ಇತರೆ ಸರೀಸೃಪಗಳು, ಕೀಟಗಳು, ಜೇಡ, ಕಪ್ಪೆಗಳ ಚಿತ್ರಗಳು ಕ್ಯಾಮೆರಾದಲ್ಲಿ ದಾಖಲಾದವು. ನನ್ನ ಅರಿವಿನ ಕಣ್ಣು ವಿಸ್ತರಿಸಿತು…’ ಎಂದು ನಡೆದುಬಂದ ದಾರಿಯನ್ನು ನೆನಪಿಸಿಕೊಳ್ಳುತ್ತಾರೆ.

ಪ್ರಥಮೇಶ್ ಅವರಲ್ಲಿನ ಛಾಯಾಗ್ರಹಣ ಆಸಕ್ತಿಯನ್ನು ಗಮನಿಸಿದ ಅವರ ತಂದೆ ಡಿಎಸ್‌ಎಲ್‌ಆರ್ ಕ್ಯಾಮೆರಾ ತಂದು ಕೈಗಿತ್ತರು. ವಾಣಿಜ್ಯ ವಿಷಯದಲ್ಲಿ ಪದವಿ ಪೂರೈಸಿದ ನಂತರ ಡಿಪ್ಲೊಮಾ ಇನ್ ಮಾರ್ಕೆಟಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಿದರು. ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸವನ್ನೂ ಗಿಟ್ಟಿಸಿಕೊಂಡರು. ಆದರೆ ಛಾಯಾಗ್ರಹಣದಲ್ಲಿ ಭವಿಷ್ಯ ರೂಪಿಸಿಕೊಳ್ಳುವ ಬಯಕೆ ಹೊಂದಿದ್ದ ಅವರಿಗೆ ಹವ್ಯಾಸಕ್ಕೆ ಸಮಯ ಮೀಸಲಿಡಲು ಸಾಧ್ಯವಾಗಲಿಲ್ಲ. ಹೀಗಾಗಿ ಕೆಲಸ ತ್ಯಜಿಸಿ, ಛಾಯಾಗ್ರಹಣವನ್ನೇ ವೃತ್ತಿಯಾಗಿ ತೆಗೆದುಕೊಳ್ಳಲು ನಿರ್ಧರಿಸಿದರು.

## ಬಗೆದಷ್ಟೂ ವಿಸ್ಮಯ

‘ಸುತ್ತಮುತ್ತಲಿನ ಜೀವ ಜಗತ್ತಿನ ಹಲವು ಮುಖಗಳನ್ನು ದಾಖಲಿಸಲು ಛಾಯಾಗ್ರಹಣ ನನ್ನ ಜೊತೆಯಾಯಿತು. ಪ್ರಕೃತಿಯ ಕುರಿತು ಗಂಧ ಗಾಳಿಯಿಲ್ಲದ ನನಗೆ ಈ ಲೋಕ ಅಚ್ಚರಿಯ ಕಣಜದಂತೆನಿಸಿತ್ತು. ಬಗೆದಷ್ಟೂ ವಿಸ್ಮಯಗಳು ತೆರೆದುಕೊಂಡವು. ಪ್ರಕೃತಿಯ ಪ್ರತಿಯೊಂದರಲ್ಲಿಯೂ ಹೇಳಲು ಸಾಕಷ್ಟು ಕಥೆಗಳಿವೆ ಎನಿಸುತ್ತಿತ್ತು. ಸಣ್ಣ ಸಣ್ಣ ಜೀವ ರಾಶಿಯಲ್ಲಿನ ಅಗಾಧ ಸೌಂದರ್ಯ ಕ್ಯಾಮೆರಾ ಮೂಲಕ ತೆರೆದುಕೊಂಡಂತೆ ಭಾಸವಾಗುತ್ತಿತ್ತು’ ಎಂದು ತಮ್ಮ ಅನುಭವಗಳನ್ನು ತೆರೆದಿಡುತ್ತಾರೆ ಪ್ರಥಮೇಶ್.

ಕ್ಯಾಮೆರಾ ಕುರಿತ ತಾಂತ್ರಿಕ ವಿಷಯಗಳೊಂದಿಗೆ ಕ್ರಿಯಾಶೀಲತೆ ಇದ್ದರೆ, ಪ್ರಕೃತಿಯ ಬಣ್ಣದ ಜಗತ್ತು ಗೋಚರಿಸದೇ ಇರಲು ಸಾಧ್ಯವಿಲ್ಲ ಎನ್ನುವುದು ಅವರ ನಂಬಿಕೆ.

‘ಪ್ರಕೃತಿ ಹಾಗೂ ವನ್ಯಜೀವಿ ಛಾಯಾಗ್ರಹಣ